# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1126(1200) |
| ಉತ್ತರಿಸಬೇಕಾದ ದಿನಾಂಕ | : 13.03.2026 |
| ಸದಸ್ಯರ ಹೆಸರು | : ಶ್ರೀ ತಿಪ್ಪಣ್ಣಪ್ಪ ಕಮಕನೂರ(ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025-26ನೇ ಸಾಲಿನ ಆಯವ್ಯಯದಲ್ಲಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಸೇರಿದಂತೆ 12 ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ಮೀಸಲಿಟ್ಟಿದ್ದ ಒಟ್ಟು ಅನುದಾನ ಎಷ್ಟು; ಈ ಪೈಕಿ ಇಲ್ಲಿಯವರೆಗೆ ವೆಚ್ಚವಾಗಿರುವ ಮೊತ್ತವೆಷ್ಟು ಮತ್ತು ಬಳಕೆಯಾಗದೆ ಬಾಕಿ ಉಳಿದಿರುವ ರೂ.1,898.92 ಕೋಟಿ ಅನುದಾನಕ್ಕೆ ಕಾರಣಗಳೇನು; (ವಿವರ ನೀಡುವುದು); | 2025-26ನೇ ಸಾಲಿನ ಆಯವ್ಯಯದಲ್ಲಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಸೇರಿದಂತೆ 12 ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ರೂ.10234.22 ಕೋಟಿಗಳ ಅನುದಾನವನ್ನು ಮೀಸಲಿಟ್ಟಿದ್ದು, ಈ ಪೈಕಿ ದಿನಾಂಕ:03.03.2026ರ ಅಂತ್ಯಕ್ಕೆ ಒಟ್ಟು ರೂ.9558.06 ಕೋಟಿಗಳ ಅನುದಾನ ವೆಚ್ಚವಾಗಿ, ರೂ.676.16 ಕೋಟಿ ಬಾಕಿ ಉಳಿಕೆಯಾಗಿರುತ್ತದೆ.<br><br>ಜನವರಿ-2026 ರ ಮಾಹೆಯಲ್ಲಿ ಮಾಸಾಶನ ಪಾವತಿಸಲು ಬಾಕಿ ಇರುವ ಫಲಾನುಭವಿಗಳಿಗೆ ಹಾಗೂ ಫೆಬ್ರುವರಿ-2026 ರ ಮಾಹೆಯಲ್ಲಿ ಮಾಸಾಶನ ಪಾವತಿಸಲು ಕೊರತೆಯಾಗಿರುವ ಅನುದಾನ ರೂ.392.00 ಕೋಟಿಗಳನ್ನು ಹೆಚ್ಚುವರಿಯಾಗಿ ಆರ್ಥಿಕ ಇಲಾಖೆಯಿಂದ ಪಡೆಯಲಾಗಿರುತ್ತದೆ.<br><br>ಮೇಲ್ಕಂಡಂತೆ ಬಾಕಿ ಉಳಿದಿರುವ ಹಾಗೂ ಹೆಚ್ಚುವರಿಯಾಗಿ ಮಂಜೂರು ಮಾಡಿರುವ ಒಟ್ಟು ರೂ.1068.16 ಕೋಟಿಗಳ ಅನುದಾನವನ್ನು 2025-26ನೇ ಸಾಲಿನ ಜನವರಿ-2026 ರ ಮಾಹೆಯಲ್ಲಿ ಬಾಕಿ ಇರುವ ಫಲಾನುಭವಿಗಳಿಗೆ ಹಾಗೂ ಫೆಬ್ರುವರಿ-2026 ರ ಮಾಹೆಯಲ್ಲಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಮಾಸಾಶನ ಪಾವತಿಸಿದಲ್ಲಿ ಪೂರ್ಣ ಅನುದಾನ ವೆಚ್ಚವಾಗುತ್ತದೆ. |
| ಆ) | 2026-27ನೇ ಸಾಲಿನ ಆಯವ್ಯಯದಲ್ಲಿ ಈ 12 ಯೋಜನೆಗಳಿಗಾಗಿ ಒಟ್ಟು ರೂ.12,157.31 ಕೋಟಿ ಬೇಡಿಕೆಯನ್ನು ಇಟ್ಟಿರುವುದು ನಿಜವೇ; ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಅನುದಾನದ ಹಂಚಿಕೆಯಲ್ಲಿ ಮಾಡಲಾದ ಪ್ರಮುಖ ಬದಲಾವಣೆಗಳೇನು; | ಹೌದು.<br><br>ಅಂಗವಿಕಲ ವೇತನ, ಮನಸ್ವಿನಿ, ವಿಧವಾ ವೇತನ ಹಾಗೂ ಇತರೆ ಯೋಜನೆಯ ಫಲಾನುಭವಿಗಳು 65 ವರ್ಷ ಮೇಲ್ಪಟ್ಟ ನಂತರ BMS ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿರುವಂತೆ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಗೆ ಮಾಸಾಶನ ರೂ.1200/- ಗಳಿಗೆ ವರ್ಗಾವಣೆಗೊಳ್ಳುವುದರಿಂದ ಹಾಗೂ ಮೇಲ್ಕಂಡ ಎಲ್ಲಾ ಯೋಜನೆಗಳಡಿ ಪ್ರತಿ ಮಾಹೆ ಹೊಸ ಮಂಜೂರಾತಿಯಂತೆ ಹೆಚ್ಚಿನ ಫಲಾನುಭವಿಗಳು ಸೇರ್ಪಡೆಯಾಗುವುದರಿಂದ, 2025-26ನೇ ಸಾಲಿನಲ್ಲಿ ಅಂದಾಜಿಸಿರುವ ಅನುದಾನಕ್ಕಿಂತ ರೂ.898.82 ಕೋಟಿಗಳ ಹೆಚ್ಚುವರಿ ಅನುದಾನವನ್ನು ಅಂದಾಜಿಸಲಾಗಿರುತ್ತದೆ. |
| ಇ) | ರಾಜ್ಯದಲ್ಲಿ 2024-25ನೇ ಸಾಲಿನಿಂದಲೇ ಮಾಸಾಶನ ಹೆಚ್ಚಳ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದ ಭರವಸೆ ಈಡೇರದಿರಲು ಕಾರಣವೇನು; | 2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ ಈ ಕೆಳಕಂಡ ಯೋಜನೆಗಳಡಿ ಮಾಸಾಶನ ಮೊತ್ತವನ್ನು ಹೆಚ್ಚಳ ಮಾಡಲಾಗಿರುತ್ತದೆ.<br><br>• ಸರ್ಕಾರದ ಆದೇಶ ಸಂಖ್ಯೆ ಮಮಇ 34 ಮಅನಿ 2024, ದಿನಾಂಕ:24.06.2024 ರನ್ವಯ ಮಾಜಿ ದೇವದಾಸಿ ಮಾಸಾಶನ ಯೋಜನೆಯಡಿ ಮಾಸಿಕ ಮಾಸಾಶನ ಮೊತ್ತವನ್ನು ಜುಲೈ 2024 ರ |

| | | |
|---|---|---|
| | | ಮಾಹೆಯಿಂದ ಜಾರಿಗೆ ಬರುವಂತೆ ರೂ.1500/- ರಿಂದ ರೂ.2000/- ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ ಕಂಇ 70 ಕೆಎಟಿ ಎಸ್‌ಎಸ್‌ಪಿ 2024, ದಿನಾಂಕ:06-07-2024 ರನ್ವಯ ಮೈತ್ರಿ ಯೋಜನೆಯಡಿ ಮಾಸಿಕ ಮಾಸಾಶನ ಮೊತ್ತವನ್ನು ಜುಲೈ 2024 ರ ಮಾಹೆಯಿಂದ ಜಾರಿಗೆ ಬರುವಂತೆ ರೂ.800/- ರಿಂದ ರೂ.1200/- ಗಳಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. |
| ಈ) | ಸರ್ಕಾರವು ಪ್ರಸ್ತುತ ಮಾಸಾಶನ ಮೊತ್ತವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ತನ್ನ ಮುಂದೆ ಇಲ್ಲ ಎಂದು ಹೇಳುತ್ತಿರುವುದು ನಿಜವೇ; ಹಾಗಿದ್ದಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಫಲಾನುಭವಿಗಳಿಗೆ ನೆರವಾಗಲು ಸರ್ಕಾರವು ಕೈಗೊಳ್ಳಲಿರುವ ಪರ್ಯಾಯ ಕ್ರಮಗಳೇನು? | ಹೌದು. ಸಾಮಾಜಿಕ ಭದ್ರತಾ ಪಿಂಚಣಿ ಮೊತ್ತವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಅರ್ಹ ಫಲಾನುಭವಿಗಳಿಗೆ ಪಾವತಿಸಲಾಗುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ:ಆರ್‌ಡಿ 60 ಕೆಎಟಿ ಎಸ್‌ಎಸ್‌ಪಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು